NAAC-(QIF & DVV) one day workshop

# ಗುಣಮಟ್ಟದ ಶಿಕ್ಷಣ ಇಂದಿನ ಅಗತ್ಯ



ತುಮಕೂರು, ಜ. ೧೩- ಆಧುನಿಕ ಯುಗದಲ್ಲಿ ಉನ್ನತ ಶಿಕ್ಷಣವು ವಿಭಿನ್ನವಾದ ಸವಾಲುಗಳನ್ನು ಎದುರಿಸುತ್ತಿದೆ. ಭಾರತದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಅಮೆರಿಕಾದ ಒಟ್ಟು ಜನಸಂಖ್ಯೆಯಷ್ಟಿದೆ ಎಂದು ಬೆಂಗಳೂರಿನ ನ್ಯಾಕ್ ಅಡ್ವೈಸರ್ ಕಮಿಟಿ ಸಲಹೆಗಾರ ಡಾ.ಎಂ.ಎಸ್. ಶ್ಯಾಮ್ ಸುಂದರ್ ಹೇಳಿದರು.

ನಗರದ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಹೊಸ ಮೌಲ್ಯಮಾಪನ ಮತ್ತು ಮಾನ್ಯತೆ ಪ್ರಕ್ರಿಯೆಯ ಮೇಲೆ ಅದರ ಪ್ರಭಾವ ಎಂಬ ವಿಚಾರ ಕುರಿತು ಏರ್ಪಡಿಸಿದ್ದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಈ ಪ್ರಮಾಣದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣವನ್ನು ಒದಗಿಸುವಲ್ಲಿ ಶಿಕ್ಷಣ ತಜ್ಞರು ಎ.ಸಿ. ರೂಂನಲ್ಲಿ ಕುಳಿತು ಕಾರ್ಯಕ್ರಮವನ್ನು ರೂಪಿಸಲು ಸಾಧ್ಯವಿಲ್ಲ, ಇದಕ್ಕೆ ಬದಲಾಗಿ ವಿಭಿನ್ನ ಮಾರ್ಗವನ್ನು ಅನುಸರಿಸಿದರೆ ವಿದ್ಯಾರ್ಥಿಗಳಿಗೆ ಸರ್ವಾಂಗೀಣ ಶಿಕ್ಷಣವನ್ನು ಕೊಡಲು ಸಾಧ್ಯವಾಗುತ್ತದೆ. ಆ ಮೂಲಕ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಬೇಕಾದ ಅವಶ್ಯಕತೆ ಇದೆ ಎಂದರು.

ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಟಿ.ಕೆ.ನಂಜುಂಡಪ್ಪ ಮಾತನಾಡಿ, ಇಂದಿನ ಶಿಕ್ಷಣದಲ್ಲಿ ಗುಣಮಟ್ಟವನ್ನು ವರ್ಧಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಉನ್ನತ ಶಿಕ್ಷಣದಲ್ಲಿ ರ್‍ಯಾಂಕಿಂಗ್ ಗಳಿಸಿದ ನೂರು ವಿಶ್ವವಿದ್ಯಾಲಯಗಳಲ್ಲಿ ಭಾರತದ ಒಂದು ವಿಶ್ವವಿದ್ಯಾಲಯವು ಸ್ಥಾನ ಪಡೆದಿಲ್ಲದಿರುವುದು ಕಳವಳಕಾರಿ ಸಂಗತಿ ಎಂದರು.

ಭಾರತದ 200 ವಿಶ್ವವಿದ್ಯಾಲಯಗಳ ರ್‍ಯಾಂಕಿಂಗ್ ಪಟ್ಟಿಯಲ್ಲಿ ಕೇವಲ 2 ವಿಶ್ವವಿದ್ಯಾಲಯಗಳು ಮಾತ್ರ ಸ್ಥಾನ ಪಡೆದಿರುವುದು ಇಂದಿನ ಶಿಕ್ಷಣದ ಶೋಚನೀಯತೆಯನ್ನು ತಿಳಿಸುತ್ತದೆ. ಆದ್ದರಿಂದ ಶಿಕ್ಷಣದ ಗುಣಮಟ್ಟವನ್ನು ವೃದ್ಧಿಸಿಕೊಳ್ಳುವಲ್ಲಿ ಈ ರೀತಿಯ ಕಾರ್ಯಕ್ರಮಗಳು ಹೆಚ್ಚು ಉಪಯುಕ್ತವಾಗುತ್ತವೆ ಎಂದರು.

ಪ್ರಾಂಶುಪಾಲರಾದ ಡಾ. ಆರ್. ಆನಂದಕುಮಾರಿ ಮಾತನಾಡಿ, ಈ ಕಾರ್ಯಾಗಾರದಲ್ಲಿ ಆಯ್ಕೆ ಮಾಡಿಕೊಂಡಿರುವ (QIF ಮತ್ತು DVV) ಹೆಚ್ಚು ಉಪಯುಕ್ತವಾಗಿದೆ. ಶಿಕ್ಷಣದ ಗುಣಮಟ್ಟವನ್ನು ವೃದ್ಧಿಸಿಕೊಳ್ಳುವಲ್ಲಿ ಟೀಚಿಂಗ್, ಲರ್ನಿಂಗ್ ಇವಾಲ್ಯೂಯೇಷನ್ ಮತ್ತು ಸೋಷಿಯಲ್ ರೆಸ್ಪಾನ್ಸಿಬಿಲಿಟಿ ಬಹಳ ಮುಖ್ಯವಾಗಿದೆ. ಸಂಬಂಧಪಟ್ಟ ಕಾಲೇಜುಗಳವರು ಈ ಕಾರ್ಯಕ್ರಮದಲ್ಲಿ ದೊರೆಯುವ ಸಲಹೆಗಳನ್ನು ಬಳಸಿಕೊಂಡು ಉನ್ನತ ಶ್ರೇಣಿಯನ್ನು ಪಡೆಯಬಹುದಾಗಿದೆ ಎಂದರು.

ಕು. ಅರ್ಚನ ಪ್ರಾರ್ಥಿಸಿದರು. ನ್ಯಾಕ್ ಕೋ-ಆರ್ಡಿನೇಟರ್ ಪ್ರೊ. ಸಿ.ಎಸ್. ಸೋಮಶೇಖರಯ್ಯ ಸ್ವಾಗತಿಸಿದರು. ಕನ್ನಡ ವಿಭಾಗದ ಮುಖ್ಯಸ್ಥೆ ಡಾ. ಬಿ.ಎಸ್. ಮಂಜುಳಾ ವಂದಿಸಿದರು. ಉಪನ್ಯಾಸಕಿ ಮಧು ಎಸ್. ಕುಮಾರ್ ಕಾರ್ಯಕ್ರಮ ನಿರೂಪಿಸಿದರು.

ಸಂಜೆವಾಣಿ Mon, 13 January 2020
https://epaper.sanjevani.com/c/47946191

Scanned with ACE Scanner

# ಸಾಧನೆಗೆ ವಿವೇಕಾನಂದರ ಆದರ್ಶ ಪಾಲನೆ ಅಗತ್ಯ




ತುಮಕೂರು

ವಿವೇಕಾನಂದರ ಚಿಂತನೆ ಮತ್ತು ಆದರ್ಶಗಳನ್ನು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಉತ್ತಮ ಸಾಧನೆಗಳನ್ನು ಮಾಡಬಹುದು ಎಂದು ಗಗನ್ ಅಬ್ಬಿನಹೊಳೆ ಅಭಿಪ್ರಾಯಪಟ್ಟರು.

ನಗರದ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಯುವ ರೆಡ್‌ಕ್ರಾಸ್ ಘಟಕದ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಯುವದಿನ ಮತ್ತು ಸ್ವಾಮಿ ವಿವೇಕಾನಂದ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಪ್ರಾಚಾರ್ಯರಾದ ಡಾ. ಆರ್. ಆನಂದಕುಮಾರಿ ಮಾತನಾಡಿ, ನಗರದ ರಾಮಕೃಷ್ಣ ವಿವೇಕಾನಂದ ಆಶ್ರಮವು ಯುವಕರಿಗಾಗಿ ಸ್ವಾಮಿ ವಿವೇಕಾನಂದ ಯುವಕ ಸಂಘ ಮತ್ತು ಯುವತಿಯರಿಗಾಗಿ ನಿವೇದಿತ ಮಹಿಳಾ ಸಂಘದ ಮೂಲಕ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಉತ್ತಮ ಕೆಲಸಗಳ ಯುವಶಕ್ತಿಯಲ್ಲಿ ಮೂಡಿಸುತ್ತಿದೆ ಎಂದರು.

ಸಂಯೋಜಕ ಪ್ರೊ. ಸೋಮಶೇಖರಯ್ಯ ಸಿ.ಎಸ್. ಮಾತನಾಡಿ, ವಿದ್ಯಾರ್ಥಿಗಳು ಮುಖ್ಯವಾಗಿ ತಾಳ್ಮೆ ಮತ್ತು ಶಿಸ್ತಿನಿಂದ ವಿಷಯಗಳನ್ನು ಅರ್ಥ ಮಾಡಿಕೊಂಡಾಗ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಯುವದಿನದ ಅಂಗವಾಗಿ ಸ್ವಾಮಿ ವಿವೇಕಾನಂದರ ಕುರಿತು ಆಯೋಜಿಸಲಾಗಿದ್ದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ಭಾರತಿ ಟಿ.ಎಂ. ಪಾಂಡುರಂಗ, ದಿವ್ಯ, ಕಿರಣಮಯಿ, ತ್ರಿವೇಣಿ ನಾಗರಾಜು ಎಂ. ಅವರಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಯುವರೆಡ್‌ಕ್ರಾಸ್ ಘಟಕದ ಕಾರ್ಯಕ್ರಮಾಧಿಕಾರಿಗಳು, ಸದಸ್ಯರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಪ್ರಥಮ ವರ್ಷದ ಬಿ.ಸಿ.ಎ. ವಿದ್ಯಾರ್ಥಿಗಳು ಮತ್ತು ಯುವ ರೆಡ್‌ಕ್ರಾಸ್‌ನ ಸ್ವಯಂ ಸೇವಕರು ನಡೆಸಿಕೊಟ್ಟರು.


ಉದಯಕಾಲ, ದಿ. 8.02.2020. ಶನಿವಾರ

# ಅತ್ಯುತ್ತಮ ಪ್ರಶಸ್ತಿ ಪಡೆದ ಪದವಿ ಸಿದ್ಧಗಂಗಾ ಕಾಲೇಜು

ಉದಯಕಾಲ ನ್ಯೂಸ್

**ತುಮಕೂರು:** ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿನ ವಿದ್ಯಾರ್ಥಿಗಳು ಎನ್.ಸಿ.ಸಿ. ಯಲ್ಲಿ ಭಾಗವಹಿಸಿ ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಶಿಬಿರಗಳಲ್ಲಿ ಭಾಗವಹಿಸಿ ವಿದ್ಯಾಭ್ಯಾಸ ಮತ್ತು ಉದ್ಯೋಗದಲ್ಲಿ ಮೀಸಲಾತಿ ಪಡೆಯುವುದಲ್ಲದೆ, ವ್ಯಕ್ತಿತ್ವ ವಿಕಸನ, ಸ್ವಯಂಸೇವೆ, ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡು ಉತ್ತಮ ಸಾಧನೆ ಮಾಡಿರುವುದನ್ನ ಪರಿಶೀಲಿಸಿ ಕರ್ನಾಟಕ ಮತ್ತು ಗೋವಾ ನಿರ್ದೇಶನಾಲಯ ಬೆಂಗಳೂರು ನಗರ, ಗ್ರಾಮೀಣ, ರಾಮನಗರ ಮತ್ತು ತುಮಕೂರು ಜಿಲ್ಲೆಯ ಎಲ್ಲಾ ಎನ್.ಸಿ.ಸಿ. ಕಾಲೇಜುಗಳ ಮೌಲ್ಯಮಾಪನ ಮಾಡಿ ಇದೇ ಪ್ರಥಮ ಬಾರಿಗೆ ತುಮಕೂರಿನ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿಗೆ ಎರಡನೇ ಅತ್ಯುತ್ತಮ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಎನ್.ಸಿ.ಸಿ. ಕರ್ನಾಟಕ ಮತ್ತು ಗೋವಾ ನಿರ್ದೇಶನಾಲಯ ಡೆಪ್ಯೂಟಿ ಡೈರೆಕ್ಟರ್ ಜೆನರಲ್ ಏರ್. ಕಮಾಂಡರ್ ಲಲಿತ್ ಕುಮಾರ್ ಜೈನ್ ಪ್ರಾಂಶುಪಾಲರಾದ ಡಾ|| ಆರ್.ಆನಂದ ಕುಮಾರಿ, ಕಾಲೇಜಿನ ಎನ್.ಸಿ.ಸಿ ಅಧಿಕಾರಿಗಳಾದ ಲೆಫ್ಟಿನೆಂಟ್ ರಾಮಲಿಂಗಾರೆಡ್ಡಿ ಎಸ್. 4ನೇ ಕರ್ನಾಟಕ ಬೆಟಾಲಿಯನ್ ತುಮಕೂರು ಆಡಳಿತಾಧಿಕಾರಿಗಳಾದ ಕರ್ನಲ್ ಹರೀಶ್ ಎ.ಆರ್. ಮತ್ತು ಸಿಎಸ್‌ಯುಒ ಪ್ರಮೋದ್ ಜಿ.ವಿ. ರನ್ನು ಟ್ರೋಫಿಯೊಂದಿಗೆ ಪ್ರಶಸ್ತಿ ಪದಕ ನೀಡಿ ಅಭಿನಂದಿಸಿ ಗೌರವಿಸಿದರು. ಪರಮ ಪೂಜ್ಯ ಶ್ರೀ ಸಿದ್ಧಲಿಂಗಸ್ವಾಮಿಗಳ ಆಶೀರ್ವಾದದೊಂದಿಗೆ ಸಂಸ್ಥೆಯ ಕಾರ್ಯದರ್ಶಿಗಳಾದ ಟಿ.ಕೆ.ನಂಜುಂಡಪ್ಪನವರು ವಿದ್ಯಾರ್ಥಿಗಳನ್ನು ಅಭಿನಂದಿಸಿದರು.



Scanned with ACE Scanner

ದಿನಾಂಕ: 11.02.2020
ವಾರ: ಮಂಗಳವಾರ
ಪತ್ರಿಕೆ: ಪ್ರಜಾಪ್ರಗತಿ

# ಸಿದ್ಧಗಂಗಾ ಕಲಾ, ವಿಜ್ಞಾನ, ವಾಣಿಜ್ಯ ಕಾಲೇಜಿಗೆ ಅತ್ಯುತ್ತಮ ಪ್ರಶಸ್ತಿ



**ತುಮಕೂರು**

ನಗರದ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿನ ವಿದ್ಯಾರ್ಥಿಗಳು ಎನ್.ಸಿ.ಸಿ.ಯಲ್ಲಿ ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಶಿಬಿರಗಳಲ್ಲಿ ಭಾಗವಹಿಸಿ ಇಂದು ವಿದ್ಯಾಭ್ಯಾಸ ಮತ್ತು ಉದ್ಯೋಗದಲ್ಲಿ ಮೀಸಲಾತಿ ಪಡೆಯುವುದಲ್ಲದೆ, ವ್ಯಕ್ತಿತ್ವ ವಿಕಸನ, ಸ್ವಯಂಸೇವೆ, ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡು ಉತ್ತಮ ಸಾಧನೆ ಮಾಡಿದ್ದಾರೆ. ಸಾಧನೆ ಪರಿಗಣಿಸಿ ಕರ್ನಾಟಕ ಮತ್ತು ಗೋವಾ ನಿರ್ದೇಶನಾಲಯ ಬೆಂಗಳೂರು ನಗರ, ಗ್ರಾಮೀಣ, ರಾಮನಗರ ಮತ್ತು ತುಮಕೂರು ಜಿಲ್ಲೆಯ ಎಲ್ಲಾ ಎನ್.ಸಿ.ಸಿ. ಕಾಲೇಜುಗಳ ಮೌಲ್ಯಮಾಪನ ಮಾಡಿ ಇದೇ ಪ್ರಥಮ ಬಾರಿಗೆ ತುಮಕೂರಿನ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿಗೆ ಎರಡನೆ ಅತ್ಯುತ್ತಮ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಎನ್.ಸಿ.ಸಿ. ಕರ್ನಾಟಕ ಮತ್ತು ಗೋವಾ ನಿರ್ದೇಶನಾಲಯ ಡೆಪ್ಯೂಟಿ ಡೈರೆಕ್ಟರ್ ಜನರಲ್ ಏರ್. ಕಾಮಾಂಡರ್ ಲಲಿತ್ ಕುಮಾರ್ ಜೈನ್ ಪ್ರಾಂಶುಪಾಲರಾದ ಡಾ. ಆರ್ ಆನಂದ ಕುಮಾರಿ, ಕಾಲೇಜಿನ ಎನ್.ಸಿ.ಸಿ ಅಧಿಕಾರಿ ಲೆಫ್ಟಿನೆಂಟ್ ರಾಮಲಿಂಗಾರೆಡ್ಡಿ ಎಸ್. 4ನೆ ಕರ್ನಾಟಕ ಬೆಟಾಲಿಯನ್ ತುಮಕೂರು ಆಡಳಿತಾಧಿಕಾರಿ ಕರ್ನಲ್ ಹರೀಶ್ ಎ.ಆರ್. ಮತ್ತು ಸಿಎಸ್‌ಯುಓ ಪ್ರಮೋದ್ ಜಿ.ವಿ. ರನ್ನು ಟ್ರೋಫಿಯೊಂದಿಗೆ ಪ್ರಶಸ್ತಿ ಪದಕ ನೀಡಿ ಅಭಿನಂದಿಸಿ ಗೌರವಿಸಿದರು. ಶ್ರೀ ಶ್ರೀ ಸಿದ್ಧಲಿಂಗಸ್ವಾಮಿಗಳ ಆಶೀರ್ವಾದದೊಂದಿಗೆ ಸಂಸ್ಥೆಯ ಕಾರ್ಯದರ್ಶಿ ಟಿ.ಕೆ. ನಂಜುಂಡಪ್ಪ ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

Scanned with ACE Scanner

ದಿನಾಂಕ:- 04.03.2020.

ವಾರ:- ಬುಧವಾರ

ಪತ್ರಿಕೆ:- ಕನ್ನಡ ಪ್ರಭ.

# ವಿದ್ಯಾರ್ಥಿಗಳ ಅಭಿವೃದ್ಧಿಗೆ ವಿವಿ ಶ್ರಮ: ಸಿದ್ದೇಗೌಡ

## ಶ್ರೀ ಸಿದ್ಧಗಂಗಾ ಪದವಿ ಕಾಲೇಜಿನ ಅಭಿವ್ಯಕ್ತಿ-2020 ವಾರ್ಷಿಕೋತ್ಸವದಲ್ಲಿ ಕುಲಪತಿ ಅಭಿಮತ

**ತುಮಕೂರು:** ತುಮಕೂರು ವಿಶ್ವವಿದ್ಯಾಲಯವು ಸದಾ ನಿಮ್ಮ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಇದನ್ನು ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ವಿವಿ ಕುಲಪತಿ ಪ್ರೊ.ವೈ.ಎಸ್.ಸಿದ್ದೇಗೌಡ ಹೇಳಿದರು.

ನಗರದ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಏರ್ಪಡಿಸಿದ್ದ ಅಭಿವ್ಯಕ್ತಿ-2020 ವಾರ್ಷಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ 92.7 ಬಿಗ್ ಎಫ್.ಎಂ. ಖ್ಯಾತಿಯ ನಿರೂಪಕಿ ಶ್ರುತಿ ಮಾತನಾಡಿ, ಯುವ ಪೀಳಿಗೆಯು ಭವಿಷ್ಯದಲ್ಲಿ ಆತ್ಮವಿಶ್ವಾಸ, ಧೈರ್ಯದಿಂದ ಸಾಧನೆಗಳು ಮಾಡಬೇಕು. ಸಾಕ್ರಟಿಕ್, ಐನ್‌ಸ್ಟೀನ್ ಅವರ ಸಾಧನೆಗಳ ಹಿಂದಿರುವ ಅವರ ನಿರಂತರ ಪರಿಶ್ರಮ, ತಾಳ್ಮೆಗಳು ನಮಗೆ ಸ್ಫೂರ್ತಿದಾಯಕವಾಗಬೇಕು ಎಂದರು.

ರಾಷ್ಟ್ರೀಯ ಕಬಡ್ಡಿ ಆಟಗಾರ ಹಾಗೂ ತರಬೇತುದಾರ ಡಾ.ಶಿವಣ್ಣ ಮಾತನಾಡಿ, ವಿದ್ಯಾರ್ಥಿಗಳು ಸಾಮಾಜಿಕ ಜವಾಬ್ದಾರಿಗಳ ಜತೆಗೆ ದೈಹಿಕ ಪರಿಶ್ರಮದ ದ್ಯೋತಕವಾದ ಮಾನಸಿಕ ಸ್ಥಿರತೆಯು ಮುಖ್ಯವಾಗಿದ್ದು, ಸದೃಢ ದೇಹ-ಮನಸ್ಸುಗಳಿಂದ ಮಾತ್ರ ಔನತ್ಯದ ಬದುಕು, ಸಾಧನೆ ಸಾಧ್ಯ ಎಂದರು.



ತುಮಕೂರಿನ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ಏರ್ಪಡಿಸಿದ್ದ ಅಭಿವ್ಯಕ್ತಿ 2020 ವಾರ್ಷಿಕೋತ್ಸವದಲ್ಲಿ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

ಸರಿಗಮಪ ಸೀಸನ್-15ರ ಸ್ಪರ್ಧಿ ಹಾಗೂ ಕಾಲೇಜಿನ ಹಳೆಯ ವಿದ್ಯಾರ್ಥಿ ವಿಜಯ್ ಕೆಲವು ಗೀತೆಗಳನ್ನು ಹೇಳುವ ಮೂಲಕ ವಿದ್ಯಾರ್ಥಿಗಳನ್ನು ರಂಜಿಸಿದರು.

**ಉತ್ತಮ ಫಲಿತಾಂಶದ ನಿರೀಕ್ಷೆ ಹೊಂದಿ:** ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಡಾ.ಆರ್.ಆನಂದಕುಮಾರಿ ಮಾತನಾಡಿ, ವಾರ್ಷಿಕೋತ್ಸವದ ಸಾರ್ಥಕದ ಸಮಯವನ್ನು ಕುರಿತಂತೆ ವಿದ್ಯಾರ್ಥಿಗಳು ಮುಂಬರುವ ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶದ ನಿರೀಕ್ಷೆ ಹೊಂದಿ ಕಾಲೇಜಿನ ಕೀರ್ತಿಯನ್ನು ಹೆಚ್ಚಿಸುವ ಜತೆಗೆ ಭದ್ರ ಭವಿಷ್ಯ ನಿರ್ಮಾಣ ಮಾಡಿಕೊಳ್ಳುವ ಜವಾಬ್ದಾರಿಯು ಎಲ್ಲರ ಮೇಲಿದೆ. ವಾಸ್ತವ ಪ್ರಜ್ಞೆಯ ಜತೆಗೆ ಸದಾ ನಮ್ಮನ್ನು ನಾವು ಮುಖಾಮುಖಿಗೊಳಿಸಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಕಾಲೇಜಿನ ವಾರ್ಷಿಕ ವರದಿಯನ್ನು ರಾಜ್ಯಶಾಸ್ತ್ರ ವಿಭಾಗದ ಡಾ.ಶಿವಪ್ರಸಾದ್ ವಾಚಿಸಿದರು. ಸಮಾರಂಭದ ಸಂಚಾಲಕ ಹಾಗೂ ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎನ್.ಪ್ರಸನ್ನಕುಮಾರ್ ಸ್ವಾಗತಿಸಿದರು. ಸಹ ಸಂಚಾಲಕಿ ವಿ.ಸಂಧ್ಯಾ ವಂದಿಸಿದರು. ಮಧು ಎಸ್.ಕುಮಾರ್ ಕಾರ್ಯಕ್ರಮ ನಿರೂಪಿಸಿದರು.

Scanned with ACE Scanner

ಪತ್ರಿಕೆಯ ಹೆಸರು : ಪ್ರಜಾ ಪ್ರಗತಿ

ತುಮಕೂರು ಡಿಸೆಂಬರ್ 28, 2020, ಸೋಮವಾರ ಪ್ರಜಾ ಪ್ರಗತಿ

# ಕಷ್ಟದಲ್ಲಿ ನೆರವಾದವರನ್ನು ಮರೆಯಬಾರದು

ತುಮಕೂರು

ತಾವು ಓದಿದ ಶಾಲಾ ಕಾಲೇಜುಗಳನ್ನು, ತಮಗೆ ವಿದ್ಯೆ ಹೇಳಿಕೊಟ್ಟ ಗುರುಗಳನ್ನು,ತಂದೆ-ತಾಯಿಯರನ್ನು,ತಮ್ಮ ಕಷ್ಟ ಕಾಲದಲ್ಲಿ ಸಹಾಯ ಮಾಡಿದವರನ್ನು ಎಂದಿಗೂ ಮರೆಯಬಾರದು ಹಾಗೆಯೇ ನಾವೂ ಸಹ ಬೇರೆಯವರಿಗೆ ಕಷ್ಟ ಕಾಲದಲ್ಲಿ ಸಹಾಯ ಮಾಡುವ ಔದಾರ್ಯವನ್ನು ಬೆಳೆಸಿಕೊಳ್ಳಬೇಕು ಎಂದು ಪ್ರೊ.ಟಿ.ಗಂಗಾಧರಯ್ಯನವರು ಹೇಳಿದರು.

ನಗರದ ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ಹಿರಿಯ ವಿದ್ಯಾರ್ಥಿಗಳ ಸಂಘದ 17ನೇ ವರ್ಷದ ವಾರ್ಷಿಕ ಸಭೆಯನ್ನು ಉದ್ಘಾಟಿಸಿ ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದರು.

> ಹಿರಿಯ ವಿದ್ಯಾರ್ಥಿಗಳು ಕಿರಿಯ ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಸೆಲೆಕ್ಷನ್‌ನಲ್ಲಿ ಉದ್ಯೋಗಕ್ಕೆ ಸಹಾಯ ಮಾಡಬೇಕು,ತಮ್ಮ ಕಂಪೆನಿಗಳಲ್ಲಿ ಖಾಲಿ ಇರುವ ಉದ್ಯೋಗವನ್ನು ಕಿರಿಯ ವಿದ್ಯಾರ್ಥಿಗಳಿಗೆ ಕೊಡಿಸಬೇಕು, ಹಿರಿಯ ವಿದ್ಯಾರ್ಥಿಗಳು ಕಿರಿಯ ವಿದ್ಯಾರ್ಥಿಗಳಿಗೆ ಸರಿಯಾದ ಮಾರ್ಗದರ್ಶನ ನೀಡಿ ಅವರ ವಿದ್ಯಾರ್ಥಿ ಜೀವನ ಯಶಸ್ವಿಯಾಗಲು ಸಹಕಾರ ನೀಡಬೇಕು.
>
> ■ ಡಾ.ಆರ್.ಆನಂದಕುಮಾರಿ



ಈ ಸಂದರ್ಭದಲ್ಲಿ 9 ಜನ ವಿಕಲಚೇತನರಿಗೆ,25 ಜನ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನಗದು ಮತ್ತು ನೆನಪಿನ ಕಾಣಿಕೆ ಕೊಟ್ಟು ಸಂಘದಿಂದ ಅಭಿನಂದಿಸಲಾಯಿತು. ಮತ್ತು ಹಿರಿಯ ವಿದ್ಯಾರ್ಥಿಗಳಾದ ಶ್ರೀನಿವಾಸ್ ರವರು 50 ಸಾವಿರ ಬೆಲೆಬಾಳುವ ಕಂಪ್ಯೂಟರ್ ಮತ್ತು 10 ಸಾವಿರ ಡೊನೇಷನ್ ನೀಡಿದರು, ಸೂರ್ಯನಾರಾಯಣ ಗುಪ್ತ 10 ಸಾವಿರ, ಪ್ರೊ.ಪೀರ್‌ಸಾಬ್‌ಗೋಲ್ 5ಸಾವಿರ, ಮಾಜಿ ಸೈನಿಕರಾದ ರಾಜಶೇಖರ್ ರವರು 5 ಸಾವಿರವನ್ನು ಸಂಘಕ್ಕೆ ದೇಣಿಗೆ ನೀಡಿ ಸಹಕಾರ ನೀಡಿದರು ಮತ್ತು ಮುಂದಿನ ವರ್ಷದಲ್ಲಿ ಕಾಲೇಜಿಗೆ 85 ಸಾವಿರ ಬೆಲೆಬಾಳುವ ಡಿಜಿಟಲ್ ರೆಕಾರ್ಡಿಂಗ್ ಸ್ಟುಡಿಯೋವನ್ನು ದೇಣಿಗೆ ನೀಡಲು ಹಿರಿಯ ವಿದ್ಯಾರ್ಥಿಗಳು ನಿರ್ಧರಿಸಿದರು.

ಪ್ರೊ.ಸಿ.ಎಸ್.ಸೋಮಶೇಖರ್, ಪ್ರೊ. ಎನ್.ಪಿ.ರವೀಂದ್ರನಾಥ್, ಪ್ರೊ.ಎಲ್.ಶ್ರೀನಿವಾಸಮೂರ್ತಿ, ಪ್ರಭಾರಾಜ್, ಕೆ.ಎಸ್. ಇಂದ್ರಾಣಿ, ಜಿ.ಎಂ.ದಿನೇಶ್, ಹೆಚ್.ಆರ್ .ನಾಗೇಶ್, ಬಿ.ಜಿ.ಗಂಗಣ್ಣ ಉಪಸ್ಥಿತರಿದ್ದರು.

ಹೆಚ್.ಆರ್.ವರುಣ್ ಕುಮಾರ್ ಪ್ರಾರ್ಥಿಸಿ, ಸೂರ್ಯನಾರಾಯಣ ಗುಪ್ತ ಸ್ವಾಗತಿಸಿ, ಜಮಾ-ಖರ್ಚು ಪಟ್ಟಿಯನ್ನು ಖಜಾಂಚಿ ಪ್ರೊ.ಟಿ.ಬಿ.ನಿಜಲಿಂಗಪ್ಪ ಓದಿದರು, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ಪ್ರೊ.ಕೆ.ದಕ್ಷಿಣಾ ಮೂರ್ತಿ ನೆರವೇರಿಸಿದರು, ಕಾರ್ಯದರ್ಶಿ ವರದಿಯನ್ನು ಪ್ರೊ.ಸಿ.ಎಸ್. ಸೋಮಶೇಖರಯ್ಯ ವಾಚಿಸಿದರು, ಡಿ.ಬಸವರಾಜು ನಿರೂಪಿಸಿ, ಹೆಚ್.ಆರ್. ನಾಗೇಶ್ ವಂದಿಸಿದರು.

Scanned with ACE Scanner

ದಿನಾಂಕ: 14-03-2021
ಪತ್ರಿಕೆ:

# ಜಿ.ಆರ್.ರೇವಣ್ಣ ಸಿದ್ದಪ್ಪಗೆ ಪಿಎಚ್‌ಡಿ



ತುಮಕೂರು: ನಗರದ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜು ಭೌತಶಾಸ್ತ್ರ ಸಹಾಯಕ ಪ್ರಾಧ್ಯಾಪಕ ಜಿ.ಆರ್.ರೇವಣ್ಣಸಿದ್ದಪ್ಪ ತುಮಕೂರಿನ ಶ್ರೀಸಿದ್ಧಾರ್ಥ ಅಕಾಡೆಮಿ ಆಫ್ ಹೈಯರ್ ಎಜುಕೇಷನ್‌ನಲ್ಲಿ ಮಂಡಿಸಿದ 'ಸಿಂಥೆಸಿಸ್, ಸ್ಟ್ರಕ್ಚರಲ್ ಅಂಡ್ ಲೂಮಿನಸೆನ್ಸ ಸ್ಟಡೀಸ್ ಆಫ್‌ರೇರ್ ಅರ್ಥ್ ಅಂಡ್ ಟ್ರಾನ್ಸಿಷನ್ ಮೆಟಲ್ ಅಯಾನ್ ಡೋಪ್ಡ್ ಸಿಲಿಕೇಟ್ಸ್' ಪ್ರಬಂಧಕ್ಕೆ ಪಿಎಚ್‌ಡಿ ಪದವಿ ನೀಡಿದೆ. ಡಾ.ಎಂ.ಎಸ್.ರುದ್ರೇಶ್ ಮಾರ್ಗದರ್ಶನದಲ್ಲಿ ಪ್ರಬಂಧ ಮಂಡಿಸಿದ್ದರು.

ದಿನಾಂಕ: 14-03-2021
ಪತ್ರಿಕೆ:

# ಜಿ.ಆರ್.ರೇವಣ್ಣ ಸಿದ್ದಪ್ಪಗೆ ಪಿಎಚ್‌ಡಿ



ತುಮಕೂರು: ನಗರದ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಕಾಲೇಜಿನಲ್ಲಿ ಭೌತಶಾಸ್ತ್ರ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವ ಜಿ.ಆರ್. ರೇವಣ್ಣ ಸಿದ್ದಪ್ಪ ಅವರಿಗೆ ತುಮಕೂರಿನ ಸಿದ್ಧಾರ್ಥ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಪಿಎಚ್‌ಡಿ ನೀಡಿ ಗೌರವಿಸಿದೆ. ರೇವಣ್ಣ ಅವರು ಸಿದ್ಧಾರ್ಥ ತಾಂತ್ರಿಕ ಮಹಾ ವಿದ್ಯಾಲಯದ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಎಂ.ಎಸ್.ರುದ್ರೇಶ್ ಮಾರ್ಗದರ್ಶನದಲ್ಲಿ ಸಿಂಥೆಸಿಸ್, ಸ್ಟ್ರಕ್ಚರಲ್ ಅಂಡ್ ಲೂಮಿನಸೆನ್ಸ್ ಸ್ಟಡೀಸ್ ಆಫ್‌ರೇರ್ ಅರ್ಥ್ ಅಂಡ್ ಟ್ರಾನ್ಸಿಷನ್ ಮೆಟಲ್ ಅಯಾನ್ ಡೋಪ್ಡ್ ಸಿಲಿಕೇಟ್ಸ್ ಪ್ರಬಂಧ ಮಂಡಿಸಿದ್ದರು.

Scanned with ACE Scanner